# ಅರ್ಥ ಹೀಗೂ ಉಂಟು!



ದೇವಿದಾಸ ಸುವರ್ಣ

ದೊಡ್ಡ ದೊಡ್ಡ ವ್ಯಕ್ತಿಗಳು ಕಸಬರಿಗೆ ಹಿಡಿದು ರಸ್ತೆಯಲ್ಲಿ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ

**ಎಂದರೆ**

ಎದುರಿನಲ್ಲಿ ಕ್ಯಾಮೆರಾದವರು, ಮಾಧ್ಯಮದವರು ಇದ್ದಾರೆ ಎಂದರ್ಥ.

ಬಸ್ಸಿನಲ್ಲಿ ಕುಳಿತಾಗ ಹೊರಗಡೆ ನೋಡಲು ಸುಂದರ ದೃಶ್ಯಗಳಿದ್ದರೂ ಹೊರಗೆಲ್ಲೂ ನೋಡದೇ ಆತ ತಿರು ತಿರುಗಿ ಕೇವಲ ಕಂಡಕ್ಟರರನ್ನೇ ನೋಡುತ್ತ ಕುಳಿತಿದ್ದಾನೆ

**ಎಂದರೆ**

ಆತನಿಗೆ ಕಂಡಕ್ಟರ್‌ನಿಂದ ಚಿಲ್ಲರೆ ಹಣ ಬರುವುದು ಬಾಕಿ ಇದೆ ಎಂದರ್ಥ.

ಊರಿನಿಂದ ಬಂದ ಸಂಬಂಧಿಕರು ಮನೆಗೆ ಬಂದ ಕೂಡಲೇ ಮನೆ ಮಂದಿಯ ಮುಖ ನೋಡುವುದನ್ನು ಬಿಟ್ಟು ಏನೋ ಹುಡುಕುತ್ತಿದ್ದಾರೆ

**ಎಂದರೆ**

ಅವರು ಮೊಬೈಲ್ ಚಾರ್ಜ್ ಮಾಡಲು ಸ್ವಿಚ್ ಬೋರ್ಡ್ ಹುಡುಕುತ್ತಿದ್ದಾರೆ ಎಂದರ್ಥ.

ಬರಿಗಾಲಿನಲ್ಲೇ ಬಂದು ದೇವಸ್ಥಾನ ಸುತ್ತು ಹಾಕುತ್ತಿದ್ದಾನೆ

**ಎಂದರೆ**

ಆತ ಮರಳುವಾಗ ಹೊಸ ಚಪ್ಪಲಿ ಧರಿಸಿಕೊಂಡು ಹೋಗಲೆಂದೇ ಬಂದಿದ್ದಾನೆ ಎಂದರ್ಥ.

ವಯಸ್ಸಾದ ಗಂಡಸರು 'ಈಗ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ' ಎಂದು ಹೇಳುತ್ತ ಎದುರಿನಿಂದ ಬರುವ ಯಾವುದೇ ಗಂಡಸರನ್ನು ಗುರುತಿಸದೇ ದೂರದಲ್ಲಿರುವ ಪ್ರತಿಯೊಬ್ಬ ಮಹಿಳೆಯರನ್ನೂ ಸರಿಯಾಗಿ ಗುರುತಿಸುತ್ತಿದ್ದಾರೆ

**ಎಂದರೆ**

ಅವರಿಗೆ ಕಣ್ಣಿನ ಸಮಸ್ಯೆ ಅಲ್ಲ, ಹೆಣ್ಣಿನ ಸಮಸ್ಯೆ ಇದೆ ಎಂದರ್ಥ.

ಮುಂಜಾನೆ ನಸುಕಿನಲ್ಲಿ ವಾಕಿಂಗ್‌ಗೆ ಹೋಗುವಾಗ ಕೈಯಲ್ಲಿ ಕೋಲು ಹಿಡಿದು ಹೊರಟಿದ್ದಾರೆ

**ಎಂದರೆ**

ಅವರು ವಾಕಿಂಗ್‌ನ ನೆಪದಲ್ಲಿ ಮಂದಿ ಮನೆಯ ಹೂ ಕದಿಯಲು ಹೊರಟಿದ್ದಾರೆ ಎಂದರ್ಥ.

ಬಸ್ಸಿನಲ್ಲಿ ಪ್ರಯಾಣಿಸುತ್ತಿರುವಾಗ ಕಿಟಕಿಯ ಮೇಲೆ ತಲೆ ಇಟ್ಟು ಮಲಗಲು ಅವಕಾಶ ಇರುವಾಗ್ಯೂ ಆಕೆ ತನ್ನ ಗಂಡನ ಭುಜದ ಮೇಲೆಯೇ ತಲೆ ಇಟ್ಟು ಮಲಗಿದ್ದಾಳೆ

**ಎಂದರೆ**

ಮದುವೆಯಾಗಿ ಕೆಲವೇ ತಿಂಗಳುಗಳು ಆಗಿವೆ ಎಂದರ್ಥ!

ಕಾರ್ಯಕ್ರಮಕ್ಕೆ ಹೊರಡಲು ಅಣಿಯಾದ ಮಹಿಳೆಯೊರ್ವಳು ಗೋದ್ರೇಜ್ ಕಪಾಟು ತೆರೆದು ಸುಮ್ಮನೆ ಕುಳಿತಿದ್ದಾಳೆ

**ಎಂದರೆ**

ಉಡಲು ಸೀರೆ ಇಲ್ಲದೇ ಚಿಂತಿಸುತ್ತ ಕುಳಿತಿದ್ದಾಳೆ ಎಂದಲ್ಲ, ಅಷ್ಟೆಲ್ಲ ಸೀರೆಗಳ ರಾಶಿಯಲ್ಲಿ ಯಾವ ಸೀರೆ ಉಡಲಿ? ಎಂಬ ಚಿಂತೆಯಲ್ಲಿ ಕುಳಿತಿದ್ದಾಳೆ ಎಂದರ್ಥ.

ಕಾರ್ಯಕ್ರಮದಲ್ಲಿ ವೇದಿಕೆಯ ಎದುರುಗಡೆ ಕುಳಿತುಕೊಳ್ಳಲು ಸಾಕಷ್ಟು ಆಸನಗಳಿದ್ದರೂ ಬಾಗಿಲ ಪಕ್ಕದಲ್ಲೇ ಕೂಡ್ರಲು ಬಯಸುತಿದ್ದಾರೆ

**ಎಂದರೆ**

ಅವರು ಕಾರ್ಯಕ್ರಮ ಆರಂಭವಾದದ್ದೇ ನಾಪತ್ತೆಯಾಗುವ ಸಿದ್ಧತೆಯಲ್ಲಿ ಬಂದಿದ್ದಾರೆ ಎಂದರ್ಥ.

